RVCE stresses the use of Biofuel in academics and research

ವಿಜಯ ಕರ್ನಾಟಕ

22th June 2012

# ಜೈವಿಕ ಇಂಧನ: ಪಠ್ಯದಲ್ಲಿ ಅಳವಡಿಸಿ

ಬೆಂಗಳೂರು : ಜೈವಿಕ ಇಂಧನ ಮೂಲಗಳ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಲು ಪಠ್ಯಪುಸ್ತಕದಲ್ಲಿ ವಿಷಯ ಅಳವಡಿಸಬೇಕು ಎಂದು ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಕಾರ್ಯಕಾರಿ ಅಧ್ಯಕ್ಷ ವೈ.ಬಿ. ರಾಮಕೃಷ್ಣ ಹೇಳಿದರು.

ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಆರ್.ವಿ. ತಾಂತ್ರಿಕ ಮಹಾವಿದ್ಯಾಲಯದಲ್ಲಿ ಸ್ಥಾಪಿಸಿರುವ ರಾಮನಗರ ಜಿಲ್ಲೆಯ 'ಜಿಲ್ಲಾ ಜೈವಿಕ ಇಂಧನ ಮಾಹಿತಿ ಹಾಗೂ ಪ್ರಾತ್ಯಕ್ಷಿಕ ಕೇಂದ್ರ' ಉದ್ಘಾಟನೆ ಕಾರ್ಯಕ್ರಮದಲ್ಲಿ ಗುರುವಾರ ಅವರು ಮಾನತಾಡಿದರು.

ಕೆಲವೇ ವರ್ಷಗಳಲ್ಲಿ ಕಚ್ಚಾತೈಲದ ಬಾವಿಗಳೆಲ್ಲಾ ಬರಿದಾಗುತ್ತವೆ ಎಂದು ಹೇಳಿರುವುದು ಯಾರನ್ನೋ ಬೆದರಿಸಲು ಅಲ್ಲ. ಹಲವು ಸಂಶೋಧನೆಗಳು ಇದನ್ನು ದೃಢಪಡಿಸಿವೆ. ಮುಂದೆ ಪರ್ಯಾಯ ಇಂಧನ ಮೂಲಗಳನ್ನು ಅವಲಂಬಿಸುವುದು ಅವಶ್ಯಕ. ಈ ಬಗ್ಗೆ ಮುಖ್ಯವಾಗಿ ಮಕ್ಕಳಿಗೆ ಪಠ್ಯಪುಸ್ತಕಗಳ ಮೂಲಕ ಜೈವಿಕ ಇಂಧನಗಳ ಮಹತ್ವ ತಿಳಿಸಬೇಕು ಎಂದರು. ಪರ್ಯಾಯ ಇಂಧನಕ್ಕೆ ಬೇಕಾದ ಬೆಳೆಗಳನ್ನು ಭಾರತದಲ್ಲಿ ಸಾವಿರಾರು ವರ್ಷಗಳಿಂದ ಬೆಳೆಯಲಾಗುತ್ತಿದೆ. ಆದರೆ, ಸಮರ್ಪಕವಾಗಿ ಬಳಸಿಕೊಳ್ಳುತ್ತಿಲ್ಲ. ಕರ್ನಾಟಕದಲ್ಲಿ ದೇಶದಲ್ಲೇ ಮೊದಲ ಬಾರಿಗೆ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಮತ್ತು ಜೈವಿಕ ಇಂಧನ ನೀತಿ ತರಲಾಗಿದೆ ಎಂದರು.

ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ವ್ಯವಸ್ಥಾಪಕ ನಿರ್ದೇಶಕ ಎ.ಕೆ. ಮೊನ್ನಪ್ಪ, ರಾಷ್ಟ್ರೀಯ ಶಿಕ್ಷಣ ಸಮಿತಿ ಅಧ್ಯಕ್ಷ ಡಾ.ಪಾಂಡುರಂಗ ಶೆಟ್ಟಿ, ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಕಾರ್ಯಕಾರಿ ಸಮಿತಿ ಸದಸ್ಯ ಜೆ.ಟಿ. ರಾಜಶೇಖರ್, ಪ್ರಾಂಶುಪಾಲ ಡಾ.ಬಿ.ಎಸ್. ಸತ್ಯನಾರಾಯಣ ಮತ್ತಿತರರು ಉಪಸ್ಥಿತರಿದ್ದರು.